

**ಪ್ರಮುಖ ಐವರು ಟೆಸ್ಟ್ ಬೌಲರ್‌ಗಳು** (ಆವರಣದಲ್ಲಿ ವಿಕೆಟ್‌ಗಳು)

| | |
|---|---|
| ಮುತ್ತಯ್ಯ ಮುರಳೀಧರ (800)★ | ಶೇನ್ ವಾರ್ನ್ (708) |
| ಅನಿಲ್ ಕುಂಬ್ಳೆ (619)★ | ಗ್ಲೆನ್ ಮೆಗ್ರಾಥ್ (563) |
| ಕರ್ಟ್ನಿ ವಾಲ್ಶ್ (519) | ★ ಸ್ಪಿನ್ನರ್‌ಗಳು |

**ಪ್ರಮುಖ ಐವರು ಎಡಗೈ ಬೌಲರ್‌ಗಳು**

| ಹೆಸರು | ದೇಶ | ಪಂದ್ಯಗಳು/ಇನಿಂಗ್ಸ್ | ವಿಕೆಟ್ |
|---|---|---|---|
| ರಂಗನಾ ಹೇರಾತ್ | ಶ್ರೀಲಂಕಾ | 80/146 | 373 |
| ಡ್ಯಾನಿಯಲ್ ವೆಟ್ಟೋರಿ | ನ್ಯೂಜಿಲೆಂಡ್ | 113/187 | 362 |
| ಡೇರಿ ಅಂಡರ್‌ವುಡ್ | ಇಂಗ್ಲೆಂಡ್ | 86/151 | 297 |
| ಬಿಷನ್ ಸಿಂಗ್ ಬೇಡಿ | ಭಾರತ | 67/118 | 266 |
| ಗ್ಯಾರಿ ಸಾಬರ್ಸ್★ | ವೆಸ್ಟ್ ಇಂಡೀಸ್ | 93/159 | 235 |

(★ವೇಗದ ಬೌಲಿಂಗ್ ಮತ್ತು ಚೈನಾಮನ್ ಬೌಲಿಂಗ್ ಕೂಡ ಮಾಡುತ್ತಿದ್ದರು)

ತಮ್ಮ ಖಾತೆಗೆ ಸೇರಿಸಿದ ವಿಕೆಟ್‌ಗಳ ಸಂಖ್ಯೆ 800. ಜುಲೈ 22ರಂದು ಕೊನೆಯ ಪಂದ್ಯದ ಕೊನೆಯ ಓವರ್‌ನ ಕೊನೆಯ ಎಸೆತದಲ್ಲಿ '800'ರ ಸಾಧನೆಯಾಗಿತ್ತು.

ಕ್ರಿಕೆಟ್‌ನ ಯಾವುದೇ ಮಾದರಿಯಲ್ಲಿ ಇಷ್ಟು ಸಂಖ್ಯೆಯ ವಿಕೆಟ್ ಗಳಿಸಿದ ಬೌಲರ್ ಇಲ್ಲ ಎಂಬುದು ಅವರ ಸಾಧನೆಯ ಮತ್ತೊಂದು ಗರಿಮೆ. ಮುರಳೀಧರ ಟೆಸ್ಟ್ ಆಡಲು ಆರಂಭಿಸಿದ ಏಳು ವರ್ಷಗಳ ನಂತರ ಅಂಗಳಕ್ಕೆ ಇಳಿದ ಹೇರಾತ್ ಹೆಸರು ಮೊದಲ ಮೂರು ವರ್ಷ ಅಷ್ಟೊಂದು ಜನಪ್ರಿಯವಾಗಿರಲಿಲ್ಲ. ಮುರಳೀಧರ ವಿದಾಯದ ನಂತರವೇ ಅವರು ಬೆಳಕಿಗೆ ಬಂದದ್ದು. ಸ್ಪಿನ್ ಜಗತ್ತನ್ನು ಆಳಿದ ಮುರಳೀಧರ ಉಪಸ್ಥಿತಿಯಲ್ಲಿ ಹೇರಾತ್‌ಗೆ ಶ್ರೀಲಂಕಾ ತಂಡದಲ್ಲಿ ಹೆಚ್ಚು ಅವಕಾಶಗಳು ಲಭಿಸುತ್ತಿರಲಿಲ್ಲ. ಅಲ್ಲಿಯವರೆಗೆ ಯಾವುದೇ ಕ್ರಿಕೆಟ್ ಋತುವಿನಲ್ಲಿ ಅವರ ಗರಿಷ್ಠ ಸಾಧನೆ 34 ವಿಕೆಟ್ ಆಗಿತ್ತು. ಆದರೆ 2010ರ ನಂತರ ಲಂಕಾ ಸ್ಪಿನ್ ಬೌಲಿಂಗ್‌ನ ಚುಕ್ಕಾಣಿ ಹಿಡಿದ ಅವರು ಆರು ಋತುಗಳಲ್ಲಿ ಉರುಳಿಸಿದ ವಿಕೆಟ್‌ಗಳ ಸಂಖ್ಯೆ ಕ್ರಮವಾಗಿ 41, 60, 25, 56, 37, 57. ಈ ವರ್ಷ ಇಲ್ಲಿಯ ವರೆಗೆ 19 ವಿಕೆಟ್ ಗಳಿಸಿದ್ದಾರೆ.

## ವಿವಾದದಿಂದ ದಾಖಲೆಯವರೆಗೆ

709 ವಿಕೆಟ್ ಕಬಳಿಸುವುದಕ್ಕಿಂತ ಮೊದಲೇ ಮುರಳಿ ಹೆಸರಿನಲ್ಲಿ ಮತ್ತೊಂದು ದಾಖಲೆ ಇತ್ತು. ಕ್ರಿಕೆಟ್ ಜಗತ್ತಿನ ಆಫ್ ಸ್ಪಿನ್ನರ್‌ಗಳ ಪೈಕಿ 'ರಿಸ್ಟ್' ಬೌಲಿಂಗ್ ಮಾಡಿದ ಮೊದಲ ಬೌಲರ್ ಅವರು. ಹೀಗಾಗಿ ಆರಂಭದಲ್ಲಿ ಅವರನ್ನು ಅನೇಕರು ಲೆಗ್ ಸ್ಪಿನ್ನರ್ ಎಂದು ತಪ್ಪಾಗಿ ಅರ್ಥೈಸಿದ್ದರು. ಮುಷ್ಟಿ ತಿರುಗಿಸುವುದರಲ್ಲಿ ಅಪ್ರತಿಮ ಎನಿಸಿಕೊಂಡಿರುವ ಅವರು ಎಂಥ ಪಿಚ್‌ನಲ್ಲಿ ಕೂಡ ಬ್ಯಾಟ್ಸ್‌ಮನ್‌ಗಳನ್ನು ಗೊಂದಲಕ್ಕೆ ಈಡುಮಾಡಬಲ್ಲರು. ಏಕದಿನ ಕ್ರಿಕೆಟ್‌ನಲ್ಲೂ ಅವರ ಸಾಧನೆ ಅಪಾರ. ಒಟ್ಟು 534 ವಿಕೆಟ್ ಬುಟ್ಟಿಗೆ ಹಾಕಿಕೊಂಡಿದ್ದಾರೆ. ಟೆಸ್ಟ್ ಮತ್ತು ಏಕದಿನ ಕ್ರಿಕೆಟ್‌ನಲ್ಲಿ ಒಟ್ಟಾರೆ 1000ಕ್ಕೂ ಅಧಿಕ ವಿಕೆಟ್ ಪಡೆದ ಏಕೈಕ ಬೌಲರ್ ಮುತ್ತಯ್ಯ.

ಸ್ಪಿನ್ನರ್‌ಗಳಿಗೆ ವಿವಾದ ಅಪರೂಪವಲ್ಲ. ಮುರಳಿ ಬೌಲಿಂಗ್ ಶೈಲಿ ಕೂಡ ವಿವಾದಕ್ಕೆ ಒಳಗಾಗಿದೆ. ಆದರೆ ತಾಂತ್ರಿಕ ಪರಿಶೀಲನೆಯ ನಂತರ ಅವರನ್ನು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ ವಿವಾದದಿಂದ ಮುಕ್ತಗೊಳಿಸಿತ್ತು. ಮುರಳಿಗೆ ಹೋಲಿಸಿದರೆ ಹೇರಾತ್ ವಿವಾದದ ಸುಳಿಯಲ್ಲಿ ಸಿಕ್ಕಿರುವುದು ಕಡಿಮೆ. ಎಡಗೈ ಸ್ಪಿನ್ನರ್‌ನ ಸಹಜವಾದ ಶೈಲಿಯನ್ನು ಮೀರಿ ಅವರು ಬೌಲಿಂಗ್ ಮಾಡಿಲ್ಲ. ಅವರ ಶೈಲಿ ನೋಡುವುದೇ ಚಂದ. ಮುರಳಿ ಮತ್ತು ವೇಗಿ ಚಮಿಂದಾ ವಾಸ್ ನಂತರ ಲಂಕಾಗೆ ಲಭಿಸಿದ ಅಪ್ರತಿಮ ಬೌಲರ್ ಅವರು. ಈಗ ಟೆಸ್ಟ್ ತಂಡದ ನಾಯಕ ಕೂಡ.

**ಯಾವ ದೇಶದ ವಿರುದ್ಧ ಎಷ್ಟೆಷ್ಟು?**

**ಮುರಳೀಧರ**

| ದೇಶ | ಪಂದ್ಯಗಳು | ವಿಕೆಟ್ |
|---|---|---|
| ಆಸ್ಟ್ರೇಲಿಯಾ | 13 | 59 |
| ಬಾಂಗ್ಲಾದೇಶ | 11 | 89 |
| ಇಂಗ್ಲೆಂಡ್ | 16 | 112 |
| ಭಾರತ | 22 | 105 |
| ನ್ಯೂಜಿಲೆಂಡ್ | 14 | 82 |
| ಪಾಕಿಸ್ತಾನ | 16 | 80 |
| ದಕ್ಷಿಣ ಆಫ್ರಿಕಾ | 15 | 104 |
| ವೆಸ್ಟ್ ಇಂಡೀಸ್ | 12 | 82 |
| ಜಿಂಬಾಬ್ವೆ | 14 | 87 |

**ರಂಗನಾ ಹೇರಾತ್**

| ದೇಶ | ಪಂದ್ಯಗಳು | ವಿಕೆಟ್ |
|---|---|---|
| ಆಸ್ಟ್ರೇಲಿಯಾ | 11 | 66 |
| ಬಾಂಗ್ಲಾದೇಶ | 8 | 41 |
| ಇಂಗ್ಲೆಂಡ್ | 10 | 40 |
| ಭಾರತ | 7 | 27 |
| ನ್ಯೂಜಿಲೆಂಡ್ | 7 | 36 |
| ಪಾಕಿಸ್ತಾನ | 19 | 90 |
| ದಕ್ಷಿಣ ಆಫ್ರಿಕಾ | 9 | 31 |
| ವೆಸ್ಟ್ ಇಂಡೀಸ್ | 7 | 23 |
| ಜಿಂಬಾಬ್ವೆ | 2 | 19 |